ಚಿದಾನಂದ ಸಾಲಿ

# ಮಣ್ಣ ಹೂವಿನ ಘಮಲು!

ಕೆ. ಶಿವಾರೆಡ್ಡಿಯವರ ಬರಹವನ್ನು ನಾನು ಮೊದಲ ಸಲ ಓದಿದ್ದು, ಅನುವಾದಿಸಿದ್ದು 1998ರಲ್ಲಿ. ತೆಲುಗಿನ ಸರಳ, ಸಹಜ ಕವಯಿತ್ರಿ ಮಹೆಜಬೀನ್‌ರ 'ಎಲೆಯುದುರೂ ಕಾಲ'ಕ್ಕೆ ಮುನ್ನುಡಿ ಬರೆದಿದ್ದವರು ಇವರೇ. ಅದರ ತಲೆಬರೆಹವೇ 'ಎ ಲಿರಿಕಲ್ ಬ್ಯೂಟಿ!' ಅಂತ ಇತ್ತು. ಅದರಲ್ಲಿ 'ಸರಿಸುಮಾರು ಏಳೆಂಟು ತಿಂಗಳ ಕಾಲ ಜಬೀನ್ ಕಾವ್ಯ ನನ್ನ ಹತ್ತಿರವೇ ಇದೆ. ಮನಸ್ಸು ಕಾಡಿದಾಗಲೆಲ್ಲ ಓದುತ್ತಲೇ ಇದ್ದೇನೆ; ಅದರಲ್ಲೂ ಈ ಒಂದು ತಿಂಗಳಿಂದ ಪಠ್ಯಪುಸ್ತಕದಂತೆ ಓದಿದ್ದೇನೆ. ಕವಿತೆಯ ವಿಷಯಕ್ಕೆ ಬಂದರೆ ನಾನು ನಿಧಾನ ಓದುಗ. ಮುಂದೆ ಸಾಗದು. ಒಂದು ಕವಿತೆ ಓದುವುದು, ಮೆಲುಕು ಹಾಕುವುದು, ಒಂದು ಕವಿತೆ ಯಾಕೆ ಅದರ ಒಂದು ಸಾಲು ಸಾಲದಾ? ಅಥವಾ ಒಂದು ಪದ? ಹಾಗೂ ಆದೀತು' ಎನ್ನುತ್ತ ಮುನ್ನುಡಿಯ ವಿಳಂಬಕ್ಕೆ ಕಾರಣವನ್ನು ವಿವರಿಸಿದ್ದರು. ಯುವ ಕವಯಿತ್ರಿಯೊಬ್ಬರ ಮೊದಲ ಸಂಕಲನಕ್ಕೆ ಅವರು ಬರೆದಿದ್ದ ಆ ಪ್ರೋತ್ಸಾಹದಾಯಕ ಸಾಲು ನನಗೆ ಅತ್ಯಂತ ಇಷ್ಟವಾಗಿತ್ತು. ಆಗಿನ್ನೂ ಅವರ ಬಗ್ಗೆ ನನಗೇನೂ ತಿಳಿದಿರಲಿಲ್ಲ.

ನಂತರ 2010ರಲ್ಲಿ ಕನ್ನಡದ ಮಹತ್ವದ ಕವಿ ಜಂಬಣ್ಣ ಅಮರಚಿಂತರು ಶಿವಾರೆಡ್ಡಿಯವರ 'ರಕ್ತಂ ಸೂರ್ಯುಡು' ಸಂಕಲನ ಕೊಟ್ಟು ಓದಿಸಿದರು. ಅದುಕಾರಣವಾಗಿ ಮುಂದೆ ಅವರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಂಕಲನ 'ಮೋಹನಾ! ಓ ಮೋಹನಾ!'ವನ್ನು ಕೇಂದ್ರ ಸಾಹಿತ್ಯ ಅಕಾಡೆಮಿಗಾಗಿ ನಾನು ಅನುವಾದಿಸಿದಾಗ,

